ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿ)
ಕಾರ್ಯ ಮತ್ತು ಪಾಲನಾ ನಗರ ಉಪವಿಭಾಗ-4
HIG-17 ನವನಗರ,
ಹು.ವಿ.ಸ.ಕಂ.ನಿ., ಹುಬ್ಬಳ್ಳಿ
ದೂರವಾಣಿ ಸಂಖ್ಯೆ:
ಮೊಬೈಲ ಸಂಖ್ಯೆ: 9480883830

HUBLI ELECTRICITY SUPPLY COMPANY LIMITED
(Wholly Owned by Govt.of Karnataka Undertaking)
Assistant Executive Engineer (Ele)
O&M City Sub-Division-4
HIG-17 Navanagar,
HESCOM, Hubballi.
Website :www.hescom.co.in
email:
aeecsd4hbl.hescom@gmailcom

CIN: U31401KA2002SGC030437

**No: HBL/CSD-4/AEE(EL)/AET/TA /20-21/** 809-14

**Date: 19-12-2020**

ಮಾನ್ಯ ಅಧೀಕ್ಷಕ ಇಂಜನೀಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿ:19-12-2020 ರಂದು ಉಪವಿಭಾಗ-4 ರಲ್ಲಿ ಜರುಗುವ ಗ್ರಾಹಕರೊಂದಿಗೆ ಸಂವಾದ ಸಭೆಯ ಕುರಿತು ಜಾಹಿರಾತನ್ನು ದಿ: 18-12-2020 ರಂದು ಕೆಲವು ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಹಾಗೂ ಶಹರ ಉಪವಿಭಾಗ-4 ರ ಶಾಖಾಧಿಕಾರಿಗಳ ಮೂಲಕ ಪ್ರಮುಖ ಗ್ರಾಹಕರಿಗೆ ಈ ಕುರಿತು ತಿಳಿಸಲಾಯಿತು. ಅದರಂತೆ ದಿನಾಂಕ 19-12-2020 ರಂದು ಮಧ್ಯಾಹ್ನ 03:30 ಘಂಟೆಗೆ ಮಾನ್ಯ ಅಧೀಕ್ಷಕ ಇಂಜನೀಯರರು(ವಿ), ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ ರವರ ಅಧ್ಯಕ್ಷತೆಯಲ್ಲಿ ಶಹರ ಉಪವಿಭಾಗ-04 ರ ಕಛೇರಿಯಲ್ಲಿ ಜರುಗಿದ ಗ್ರಾಹಕರೊಂದಿಗೆ ಸಂವಾದ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು.

1) ಶ್ರೀ ಎಸ್. ಆರ್. ಶಾನಭಾಗ, ಮಾನ್ಯ ಅಧೀಕ್ಷಕ ಇಂಜನೀಯರ್(ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ.
2) ಶ್ರೀ. ವಿಶ್ವನಾಥ ಶಿರಹಟ್ಟಿಮಠ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ).
3) ಶ್ರೀ. ಬಸವರಾಜ ಎಮ್ ಹೊಸಮನಿ, ಸಹಾಯಕ ಇಂಜನೀಯರರು(ತಾಂತ್ರಿಕ)
4) ಶ್ರೀ ಆರ್. ಟಿ. ವಿಶ್ವಮೂರ್ತಿ, ಶಾಖಾಧಿಕಾರಿಗಳು, ನವನಗರ ಶಾಖೆ.
5) ಶ್ರೀ. ಮಂಜುನಾಥ ವಡ್ಡರ, ಶಾಖಾಧಿಕಾರಿಗಳು, ಉಣಕಲ್ ಶಾಖೆ.
6) ಶ್ರೀ ರವಿಕುಮಾರ ಸಿ.ಡಿ. ಶಾಖಾಧಿಕಾರಿಗಳು, ತಾರಿಹಾಳ ಶಾಖೆ.
7) ಶ್ರೀ ಬಿ. ಆರ್. ಕೊಣ್ಣೂರಗೌಡ್ರು, ಓವರ್‌ಶೀಯರ, ನವನಗರ ಶಾಖೆ.
8) ಶ್ರೀ ಪ್ರಭಾಕರ ಮರ್ಕೇರಿ. ಪ್ರಭಾರಿ ಹಿರಿಯ ಸಹಾಯಕರು.
9) ಶ್ರೀಮತಿ ವಿದ್ಯಾ ತಾಮನಕರ, ಕಿರಿಯ ಸಹಾಯಕಿ.

<u>ಸಭೆಯಲ್ಲಿ ಹಾಜರಿದ್ದ ಗ್ರಾಹಕರು/ದೂರು.</u>

1. **ಶ್ರೀ ಎಸ್. ಬಿ. ವೈದ್ಯ. (ಗ್ರಾಹಕರು)**
   ವಿಶ್ವೇಶ್ವರ್‌ನಗರ, ಹುಬ್ಬಳ್ಳಿ. ಮೊ.ನಂ: 9405873725

<u>ದೂರುಗಳು.</u>

1. 1912 ನಲ್ಲಿ ದೂರು ನೀಡಿದವ ಕುರಿತು ರೆಕಾರ್ಡಿಂಗ್ ವ್ಯವಸ್ಥೆ ಇರುವುದಿಲ್ಲ.
2. Call centre executives ದೂರಿಗೆ ಸರಿಯಾಗಿ ಸ್ಪಂದಿಸುವುದಿಲ್ಲ.
   ಗ್ರಾಹಕರು ದೂರು ನೀಡಿದ ಹಾಗೂ ಸ್ವೀಕೃತಿಯಾದ ಬಗ್ಗೆ ಗ್ರಾಹಕರಿಗೆ ಸಂದೇಶ(SMS) ಬರುತ್ತಿಲ್ಲವೆಂದು ದೂರಿದರು.
3. ಗ್ರಾಹಕರೊಂದಿಗೆ ಸಂವಾದ ಸಭೆಯು ಇರುವ ಕುರಿತು Data base ದಲ್ಲಿರುವ ಮೊಬೈಲ್ ಸಂಖ್ಯೆಗಳಿಗೆ ಸಂದೇಶ(SMS) ಕಳುಹಿಸಲು ಸಲಹೆ ನೀಡಿದರು.
4. ಸದರಿ ಗ್ರಾಹಕರು ವಿಶ್ವೇಶ್ವರ್‌ನಗರ ಶಾಖೆ, ಕಾ ಮತ್ತು ಪಾ ಶಹರ ಉಪವಿಭಾಗ-1 ಕಛೇರಿಯ ಗ್ರಾಹಕರಾಗಿದ್ದು ಅವರ ಇನ್ನಿತರೇ ದೂರುಗಳ ಬಗ್ಗೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಮತ್ತು ಸ.ಕಾ.ನಿ.ಇಂ(ವಿ) ರವರಿಗೆ ದೂರವಾಣಿ ಮುಖಾಂತರ ತಿಳಿಸಲಾಯಿತು. ಮತ್ತು ಸದರಿ ದಿನದಂದು ಉಪವಿಭಾಗ-1 ರಲ್ಲಿ ಕೂಡ ಗ್ರಾಹಕರ ಸಂವಾದ ಸಭೆ ಇದ್ದು ಅಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆ ಪರಿಹರಿಸಿಕೊಳ್ಳಲು ತಿಳಿಸಲಾಯಿತು.

Scanned by CamScanner

2. ಶ್ರೀ ವಿ. ವಿ. ಚವಟೆ (ಗ್ರಾಹಕರು)
MIG-250, ನವನಗರ,
ಹುಬ್ಬಳ್ಳಿ. ಮೊ. ನಂ: 9448736603

**ದೂರು:** ಪೋಸ್ಟ್ ಆಫೀಸ್, ನವನಗರ ಹತ್ತಿರವಿರುವ 250KVA ವಿದ್ಯುತ್ ಪರಿವರ್ತಕ ಕೇಂದ್ರವನ್ನು ಸ್ಥಳಾಂತರಿಸಲು ಗ್ರಾಹಕರು ವಿನಂತಿಸಿರುತ್ತಾರೆ. ಇದರಿಂದಾಗಿ ತಮಗೆ ಗ್ಯಾಸ್ ಪೈಪ್‌ಲೈನ್ ವ್ಯವಸ್ಥೆ ಪಡೆಯಲಾಗಿರುವುದಿಲ್ಲ ಮತ್ತು ಪರಿವರ್ತಕದಿಂದ ಜೋರಾಗಿ ಶಬ್ದ ಬರುವುದರಿಂದ ತಮಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಶಾಖಾಧಿಕಾರಿಗಳಿಗೆ ಸದರಿ ಪರಿವರ್ತಕ ಕೇಂದ್ರವನ್ನು ಸ್ಥಳಾಂತರಿಸಲು ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿ ಪ್ರಸ್ತಾವನೆಯನ್ನು ತಯಾರಿಸಿ ಸದರಿ ಗ್ರಾಹಕರಿಗೆ ನೋಂದಣಿ ಅಂಚೆ ಮೂಲಕ ಕಳುಹಿಸಲು ಹಾಗೂ ಕಂಪನಿಯ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

3. ಶ್ರೀ ರಮೇಶ ವಿ. ದಾನಿ
(ಆಫೀಸ್ ದಾಜಿಬಾನಪೇಟ)
ಭೈರಿದೇವರಕೊಪ್ಪ, ಹುಬ್ಬಳ್ಳಿ. ಮೊ ನಂ: 9886195180.

**ದೂರು:** ಭೈರಿದೇವರಕೊಪ್ಪ 100KVA ವಿದ್ಯುತ್ (ವರ್ಗಾ ಟಿ.ಸಿ.) ಪರಿವರ್ತಕವನ್ನು ತಮ್ಮ ಪ್ಲಾಟಿನ ಮುಂದಿರುವುದನ್ನು ಸ್ಥಳಾಂತರಿಸಲು ವಿನಂತಿಸಿರುತ್ತಾರೆ. ನಂತರ ಗ್ರಾಹಕರಿಗೆ ಪರಿವರ್ತಕ ಕೇಂದ್ರವನ್ನು ಸ್ಥಳಾಂತರಿಸಲು ತಕರಾರು ರಹಿತ ಸೂಕ್ತ ಜಾಗವನ್ನು ತಿಳಿಸಿದಲ್ಲಿ ಕಂಪನಿಯ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಲಾಯಿತು.

ಈ ಮೇಲಿನ ದೂರುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ/ಸಿಬ್ಬಂಧಿಗಳಿಗೆ ಮಾನ್ಯ ಅಧೀಕ್ಷಕ ಇಂಜನೀಯರ್(ವಿ) ರವರು ಸೂಚನೆ ನೀಡಿದರು.

ಸಭೆಯು ಮದ್ಯಾಹ್ನ 03:30ಕ್ಕೆ ಸರಿಯಾಗಿ ಪ್ರಾರಂಭಿಸಲಾಗಿದ್ದು, ಗ್ರಾಹಕರ ದೂರುಗಳನ್ನು ಸ್ವೀಕರಿಸಿ ಹಾಗೂ ಪುಸ್ತಕದಲ್ಲಿ ದಾಖಲಿಸಿ ಸಂಪದಿಸಿ 04:30ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಗಿದೆ.

ಸಭೆಯನ್ನು ಸಾಮಾಜಿಕ ಅಂತರ ಕಾಯ್ದುಕೊಂಡು ಮತ್ತು ಕೋವಿಡ್-19 ರ ಸುರಕ್ಷತಾ ಕ್ರಮಗಳನ್ನು ಜರುಗಿಸಿ ನಡೆಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನಾ ನಗರ ಉಪವಿಭಾಗ-4
ಹು.ವಿ.ಸ.ಕಂ.ನಿ, ಹುಬ್ಬಳ್ಳಿ.

ಪ್ರತಿಯನ್ನು

1. ಮಾನ್ಯ ಪ್ರಧಾನ ವ್ಯವಸ್ಥಾಪಕರು(ತಾಂ), ಹೆಸ್ಕಾಂ, ನಿಗಮ ಕಛೇರಿ, ನವನಗರ, ಹುಬ್ಬಳ್ಳಿ-580025. ರವರ ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಅಧೀಕ್ಷಕ ಇಂಜನೀಯರರು(ವಿ), ಮಾಹಿತಿ ಮತ್ತು ತಂತ್ರಜ್ಞಾನ ಶಾಖೆ, ನಿಗಮ ಕಛೇರಿ, ಹುಬ್ಬಳ್ಳಿ ರವರ ಗೌರವಪೂರ್ವಕ ಮಾಹಿತಿಗಾಗಿ ಹಾಗೂ ಸಭೆಯ ಕುರಿತು ಹೆಸ್ಕಾಂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ ದಯಾಪರರಲ್ಲಿ ಸಲ್ಲಿಸಲಾಗಿದೆ.
3. ಮಾನ್ಯ ಅಧೀಕ್ಷಕ ಇಂಜನೀಯರರು(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಹೆಸ್ಕಾಂ, ಶಿವಗಂಗಾ ಲೇಔಟ್, ಕೇಶ್ವಾಪುರ ರಸ್ತೆ, ಹುಬ್ಬಳ್ಳಿ ರವರ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಮಾನ್ಯ ಕಾರ್ಯನಿರ್ವಾಹಕ ಇಂಜನೀಯರರು(ವಿ), ಕಾ & ಪಾ ನಗರ ವಿಭಾಗ, ಹೆಸ್ಕಾಂ, ತಬೀಬ್‌ಲ್ಯಾಂಡ್ ಹುಬ್ಬಳ್ಳಿ ಇವರ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಶಾಖಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ಶಾಖೆ, ಹೆಸ್ಕಾಂ, ನವನಗರ /ಉಣಕಲ್/ತಾರಿಹಾಳ ರವರ ಮಾಃಇಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

o/c.

Scanned by CamScanner